# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 292 ಗ್ರಾಪಂಕಾ 2015, ದಿನಾಂಕ 30.06.2015/02.07.2015
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ-379/2015/ಎಆರ್ಇ-1, ದಿನಾಂಕ 26.02.2017
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 06.03.2018
4) ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 07.04.2018

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

"While you DGO Sri N.M.Konasali was working as PDO, yettinahalli(MK) GP, Hirekerur Taluk, Haveri District joining with the President of the Panchayat Smt.Rekha Nagaraja, Narasapura had created false employement chit in respect of Sri Krishnappa s/o Ramappa of Hadarihalli and drawn Government amount and payment was made even though said person had died on 08.12.2008 itself and therefore, you the DGO has failed to maintain absolute integrity, devotion to duty and committed an act which is unbecoming of a Government Servant and therefore, you are guilty of misconduct under rule 3(1)(i) to (iii) of KCS(Conduct) Rules, 1966. Hence the Charge.

The Inquiry Officer has held that the disciplinary authority has clearly proved that the DGO while working as PDO, Yettinahalli(MK) GP, Hirekerur Taluk, Haveri District has commited grave official misconduct by creating false documents showing that a dead person by name Krishnappa s/o Ramappa worked under MGNREGA scheme and had drawn Rs.4,858/- showing that the said amount was paid to Krishnappa as wages for having worked under MGNREGA scheme and thereby misappropriated the government funds."

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ರವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರು ರವರ ದಿನಾಂಕ: 23.02.2018 ರ ವರದಿಯಲ್ಲಿ ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಂದ ಪ್ರಕರಣದಲ್ಲಿ ದುರುಪಯೋಗದ ಮೊತ್ತ ರೂ.4,858/- ಗಳನ್ನು ಸದರಿ ನೌಕರರ ಪಿಂಚಣಿ ಭತ್ಯೆಗಳಲ್ಲಿ ವಸೂಲಿ ಮಾಡುವುದು ಮತ್ತು ಸದರಿ ನೌಕರರಿಗೆ ದೊರಕುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಹತ್ತು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

ಯತ್ತಿನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಾದ್ರಿಹಳ್ಳಿ ಗ್ರಾಮದಲ್ಲಿ ಅಗಸಿಬಾಗಿಲು ಮುಖ್ಯ ರಸ್ತೆಯಿಂದ ದ್ಯಾಮವ್ವನ ಗುಡಿವರೆಗೆ ಸರ್ವಋತು ರಸ್ತೆ ನಿರ್ಮಾಣ ಕಾಮಗಾರಿಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2013-14ನೇ ಸಾಲಿನಲ್ಲಿ ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಎನ್.ಎಂ.ಆರ್. ನಲ್ಲಿ ಶ್ರೀ ಕೃಷ್ಣಪ್ಪ ಕೊರವರ ಇವರ ಹೆಸರು ತಾಂತ್ರಿಕ ದೋಷದಿಂದ ನಮುದಾಗಿರುತ್ತದೆ. ಸದರಿಯವರು ಪೌತಿಯಾಗಿದ್ದರೂ ಸಹಿತ ಅವರ ಹೆಂಡತಿಯು ಕೆಲಸಕ್ಕೆ ಬಂದಿದ್ದರಿಂದ ಸದರಿ ಕೃಷ್ಣಪ್ಪ ಕೊರವರ ಇವರ ಹೆಸರು ಎನ್.ಎಂ.ಆರ್. ನಲ್ಲಿ ತಾಂತ್ರಿಕ ದೋಷದಿಂದ ನಮುದಾಗಿರುತ್ತದೆ. ಅವರು ಮರಣ ಹೊಂದಿದ ಬಗ್ಗೆ ಅವರ ಕುಟುಂಬದವರು ಗ್ರಾಮ ಪಂಚಾಯತಿಗೆ ಲಿಖಿತವಾಗಿ ಯಾವುದೇ ಮಾಹಿತಿ ನೀಡಿರುವುದಿಲ್ಲ. ಅವರ ಹೆಂಡತಿಯಾದ ಶ್ರೀಮತಿ ಜಯಮ್ಮ ಕೊರವರ ಇವರ ಹೆಸರಿಗೆ ಕೂಲಿ ಹಣವು ಜಮೆ ಆಗಿರುವ ವಿಷಯವು ನನ್ನ ಗಮನಕ್ಕೆ ಬಂದ ತಕ್ಷಣ, ಸದರಿ ಜಯಮ್ಮನವರಿಂದ ರೂ.4,858/- ಗಳನ್ನು ಗ್ರಾಮ ಪಂಚಾಯತಿಯ ಮ.ಗಾಂ.ರಾ.ಗ್ರಾ.ಉ.ಖಾತರಿ ಯೋಜನೆ ಖಾತೆಗೆ ಜಮೆ ಮಾಡಿಸಿ ನಂತರ ದಿನಾಂಕ 06.02.2014 ರಂದು ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,ಬೆಂಗಳೂರು ಇವರಿಗೆ ಆ ಮೊತ್ತಕ್ಕೆ ಡಿಡಿ (ಸಂಖ್ಯೆ: 519130, ದಿನಾಂಕ 06.02.2014) ತೆಗೆದು ಸರ್ಕಾರಕ್ಕೆ ಜಮೆ ಮಾಡಿರುತ್ತೇನೆ. ಈ ಪ್ರಕರಣವು ತಾಂತ್ರಿಕ ದೋಷದಿಂದ ಆಗಿರುವುದರಿಂದ ಇದರಲ್ಲಿ ನನ್ನದು ಯಾವುದೇ ದುರುದ್ದೇಶ ಇರುವುದಿಲ್ಲ. ಆದುದರಿಂದ ದಯಾಳುಗಳಾದ ತಾವು ನನ್ನ ಮೇಲಿನ ಆರೋಪವನ್ನು ಮನ್ನಿಸಿ ನನ್ನನ್ನು ದೋಷಮುಕ್ತನನ್ನಾಗಿ ಮಾಡಬೇಕೆಂದು ಮನವಿ ಮಾಡಿರುತ್ತಾರೆ. ದುರುಪಯೋಗದ ಮೊತ್ತವನ್ನು ಸರ್ಕಾರಕ್ಕೆ ಮರು ಜಮೆ ಮಾಡಿರುವ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಆರೋಪದ ತೀವ್ರತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಂದ ಪ್ರಕರಣದಲ್ಲಿ ದುರುಪಯೋಗದ ಮೊತ್ತ ರೂ.4,858/- ಗಳನ್ನು ಸದರಿ ನೌಕರರ ಪಿಂಚಣಿ ಭತ್ಯೆಗಳಲ್ಲಿ ವಸೂಲಿ ಮಾಡುವುದು ಮತ್ತು ಸದರಿ ನೌಕರರಿಗೆ ದೊರಕುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಹತ್ತು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಂದ ಪ್ರಕರಣದಲ್ಲಿ ದುರುಪಯೋಗದ ಮೊತ್ತ ರೂ.4,858/- ಗಳನ್ನು ಸದರಿ ನೌಕರರ ಪಿಂಚಣಿ ಭತ್ಯೆಗಳಲ್ಲಿ ವಸೂಲಿ ಮಾಡುವುದು ಮತ್ತು ಸದರಿ ನೌಕರರಿಗೆ ದೊರಕುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಹತ್ತು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 292 ಗ್ರಾಪಂಕಾ 2015, ಬೆಂಗಳೂರು, ದಿನಾಂಕ: 04.07.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ರ ನಿಯಮ 214 ರನ್ವಯ ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರಿಂದ ಪ್ರಕರಣದಲ್ಲಿ ದುರುಪಯೋಗದ ಮೊತ್ತ ರೂ.4,858/- ಗಳನ್ನು ಸದರಿ ನೌಕರರ ಪಿಂಚಣಿ ಭತ್ಯೆಗಳಲ್ಲಿ ವಸೂಲಿ ಮಾಡುವುದು ಮತ್ತು ಸದರಿ ನೌಕರರಿಗೆ ದೊರಕುವ ಪಿಂಚಣಿಯಲ್ಲಿ ಶೇ.10 ರಷ್ಟನ್ನು ಹತ್ತು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಹಾವೇರಿ ಜಿಲ್ಲಾ ಪಂಚಾಯತಿ, ಹಾವೇರಿ.
6) ಕಾರ್ಯನಿರ್ವಾಹಕ ಅಧಿಕಾರಿ, ಹಿರೇಕೆರೂರು ತಾಲ್ಲೂಕು ಪಂಚಾಯತಿ, ಹಿರೇಕೆರೂರು, ಹಾವೇರಿ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ ಎನ್.ಎಂ.ಕೊಣಸಾಲಿ, ನಿವೃತ್ತ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯತ್ತಿನಹಳ್ಳಿ(ಎಂ.ಕೆ.) ಗ್ರಾಮ ಪಂಚಾಯತಿ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.